ಪ್ರಬಂಧ

# ಕೊನೆಯ ಹಾಳೆಯ ಕಡೆಯ ಮಗ್ಗುಲು



ಯೋಗೀಂದ್ರ ಮರವಂತೆ

ಕಲೆ: ಡಿ.ಎಸ್. ಚೌಗಲೆ

ವರ್ಷವಿಡೀ ನನ್ನ ಕೋಣೆಯ ಗೋಡೆಯಲ್ಲಿ ತೂಗುಹಾಕಿದ ಕನ್ನಡ ಕ್ಯಾಲೆಂಡರಿನಲ್ಲಿ ಆರು ಹಾಳೆಗಳು. ಪ್ರತಿ ಹಾಳೆಗೂ ಎರಡು ಮಗ್ಗುಲು. ಒಂದೊಂದು ಮಗ್ಗುಲೂ ತೆರೆಯುತ್ತದೆ ಒಂದೊಂದು ಮಜಲು. ಮಗ್ಗುಲು ಬದಲಿಸಬೇಕಿದ್ದರೆ ಮೊದಲೇ ತಿಳಿದಿರಬೇಕು – ಇದ್ಯಾವ ಮಾಸ? ಒಂದು ವೇಳೆ ತಿಳಿಯದೇ ತಿರುವಿದರೆ ಭೂತಕ್ಕೋ ಭವಿಷ್ಯಕ್ಕೋ ಅನಾಮತ್ ಅನಧಿಕಾರ ಪ್ರವೇಶ ಖಚಿತ. ಪ್ರತಿ ಮಾಸದಲ್ಲೂ ಲೆಕ್ಕ ಬರುವವರೆಲ್ಲ ಲೆಕ್ಕ ಇಡಬಹುದಾದಷ್ಟು ಅಥವಾ ಎಷ್ಟು ಲೆಕ್ಕ ಬಂದರೂ ಲೆಕ್ಕಕ್ಕೆ ಸಿಗದಷ್ಟು ದಿನ, ಕ್ಷಣ, ಗಳಿಗೆಗಳು. ಆದರೆ ಕ್ಯಾಲೆಂಡರಿನ ಮಟ್ಟಿಗೆ ಅವೆಲ್ಲವೂ ನಿರ್ಲಿಪ್ತ ‘ನಂಬರ್‌ಗಳು’, ಅಷ್ಟೇ. ಕೆಲವೊಮ್ಮೆ ಆಯಸ್ಸಿನ ಸಣ್ಣ, ಕೆಲವೊಮ್ಮೆ ದೊಡ್ಡ ಭಾಗವಾದ ಪೂರ್ತಿ ಒಂದು ವರ್ಷದ ಕರಾರುವಾಕ್ಕಾದ ಅಳತೆ ಇಡುವ ಗುರುತರ ಹೊಣೆಗಾರಿಕೆಯ ಕ್ಯಾಲೆಂಡರಿನಲ್ಲಿ ತುಂಬಿರುವುದು ಬರೇ ನೀರಸ ನಿರ್ಜೀವ ಅಂಕೆ ಸಂಖ್ಯೆಗಳು, ಕಳೆದದ್ದು ಉಳಿದದ್ದು ಎಷ್ಟೇ ನೋವಿನ ನಲಿವಿನ ದಿನವೇ ಆಗಿದ್ದರೂ. ಸೋಮವಾರದಿಂದ ಆದಿತ್ಯವಾರದವರೆಗಿನ ಅವೇ ಅವೇ ಕ್ಷಣ, ದಿನ, ವಾರ ಗಣನೆ. ಒಂದೊಂದು ದಿನಕ್ಕೂ ಒಂದೊಂದು ಅಂಕೆ, ಆ ದಿನದಲ್ಲಿ ಯಾರ ಅಂಕೆಗೆ ಏನೂ ಸಿಗದೇ ಎಲ್ಲವೂ ನಡೆದಿದ್ದರೂ ನಡೆಯುವುದಿದ್ದರೂ ಕಳೆದುಹೋದದ್ದು, ಈಗ ಇರುವುದು, ಮುಂದೆ ಬರಲಿರುವುದು, ಎಲ್ಲವೂ ಬರೇ ಒಂದಂಕೆ, ಬರೇ ಎರಡಂಕೆ, ಮುನ್ನೂರ ಅರವತ್ತೈದರಲ್ಲಿ ಒಂದು ಇನ್ನೊಂದು ಮತ್ತೊಂದು.

ವರ್ಷವೊಂದನ್ನು ಮುನ್ನೂರ ಅರವತ್ತೈದು ತುಂಡುಗಳಾಗಿ ವಿಭಾಗಿಸುವುದು ಮತ್ತೆ ಜೋಡಿಸುವುದು ಎಲ್ಲಿ ಶುರು ಆಯಿತು ಎಂದು ಹುಡುಕುತ್ತ ಹೊರಟರೆ ಹಲವು ಹಾದಿ ಕವಲುಗಳು ಎದುರಾಗಬಹುದಾದರೂ, ಅವುಗಳಲ್ಲೊಂದು ನಿಮ್ಮನ್ನು ಖಂಡಿತ ಅತಿ ಹಳೆಯ ಈಜಿಪ್ಟಿಗೆ ಕರೆದೊಯ್ಯುತ್ತದೆ. ಇನ್ನು ಕೆಲವು ಹಾದಿಗಳು ಗ್ರೀಸ್, ಮಧ್ಯ ಪ್ರಾಚ್ಯ, ಭಾರತದ ಪುರಾತನ ಯುಗಕ್ಕೂ ಕರೆದೊಯ್ಯಬಹುದು. ಆ ಕಾಲದ ಖಗೋಳ ಶಾಸ್ತ್ರಜ್ಞರು, ಗಣಿತಜ್ಞರು, ವಿಜ್ಞಾನಿಗಳು, ಚಿಂತಕರನ್ನು ಪರಿಚಯಿಸಬಹುದು. ನಾವು ನೀವು ತಿಳಿಯದ ಹಿಂದಿಗಿಂತ ಹಿಂದಿನ ಕಾಲದಲ್ಲಿಯೇ ಚಾಂದ್ರಮಾನ